ದಿನಾಂಕಃ 27.03.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀಸವಾಲುಃ ಶ್ರೀ. ಕೆವಿಎಸ್‌ಆರ್ ವಕೀಲರಿಂದದ ಪ್ರತಿವಾದಿ ಪರವಾಗಿ.

ಪ್ರತಿವಾದಿಯರು ತಮಗೆ ಬಟ್ಟೆಗಳು ಬೇಕು ಎಂದು 2017ರ ಡಿಸೆಂಬರ್‌ನ ಮೊದಲನೇ ವಾರದಲ್ಲಿ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ಡಿಸೆಂಬರ್ ಮೊದಲನೇ ವಾರದಲ್ಲಿ ಬಟ್ಟೆಗಳು ಬೇಕು ಎಂದು ಕೇಳಿದ್ದರೂ ನಾವು ಉದ್ದೇಶಪೂರ್ವಕವಾಗಿ ದಿಃ26.01.2018ರಂದು ಸರಬರಾಜು ಮಾಡಿರುತ್ತೇವೆ ಎಂರದೆ ಸರಿಯಲ್ಲ. ಸಾಕ್ಷಿ ಸ್ವತಃ ಅವರು ಬಂದು ಖರೀದಿ ಮಾಡಿದಾಗ ಕೊಡಲಾಗಿರುತ್ತದೆ ಎಂದು ನುಡಿದಿರುತ್ತಾರೆ. ನಾವು ವಿಳಂಬವಾಗಿ ವಸ್ತುಗಳನ್ನು ಕಳುಹಿಸಿದ್ದರಿಂದ ದಿಃ19.01.2018ರಲ್ಲಿ ಪ್ರತಿವಾದಿಯರ ತಂದೆ ತೀರಿಕೊಂಡಿದ್ದರಿಂದ ನಾವು ಕಳುಹಿಸಿದ ವಸ್ತುಗಳನ್ನು ವಾಪಸ್ಸು ಕಳುಹಿಸುತ್ತೇವೆ ಎಂದು ಹೇಳಿದ್ದರೂ ಸಹ ನಾವು ಕಳುಹಿಸಿಸುವುದು ಬೇಡ ಹಣವನ್ನು ತಡವಾಗಿ ಕೊಡಿ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮಗೆ ಅವರು ಯಾರು ಏನು ಎನ್ನುವುದು ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ದಿಃ07.04.2018ರಂದು ಪ್ರತಿವಾದಿಯರ ತಾಯಿ ತೀರಿಕೊಂಡಿದ್ದರಿಂದ ಹಣವನ್ನು ತಡವಾಗಿ ಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಿಃ11.05.2018 ರಂದು ಪ್ರತಿವಾದಿಯರು ರೂ.40,000-00 ಗಳನ್ನು ನಮ್ಮ ಬ್ಯಾಂಕ್ ಖಾತೆಗ ಜಮಾ ಮಾಡಿರುತ್ತಾರೆ ಎಂದರೆ ಸರಿ. ದಿಃ24.08.2018 ರಂದು ಪ್ರತಿವಾದಿಯರು ರೂ.1,02,538-00ಗಳನ್ನು ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿ. ಇನ್‌ವಾಯಸ್ ಬಿಲ್ಲಿನ ಸಂಪೂರ್ಣ ಹಣವನ್ನು ಪ್ರತಿವಾದಿಯರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಾನು ಬಟ್ಟೆಗಳನ್ನು ಖರೀದಿ ಮಾಡುವಾಗ ಬಾಕಿ ಇರುವ ಹಣದ ಮೇಲೆ ಬಡ್ಡಿಯನ್ನು ಕೊಡುತ್ತೇನೆ ಎಂದು ಒಪ್ಪಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ನಮಗೆ ಯಾವುದೇ ಬಾಕಿ ಹಣ ಬರುವುದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಯಾವುದೇ ಹಣ ಬರುವುದು ಬಾಕಿ ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ